# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2016-17ನೇ ಸಾಲಿನಲ್ಲಿ ರೀಲಿಂಗ್ ಶೆಡ್ ನಿರ್ಮಾಣಕ್ಕೆ ಘಟಕ ದರ ಮತ್ತು ಸಹಾಯಧನ ಪರಿಷ್ಕರಣೆ ಕುರಿತು.

**ಓದಲಾಗಿದೆ:**

1) ಸರ್ಕಾರದ ಆದೇಶ ಸಂಖ್ಯೆ: ತೋಇ 109 ರೇಕೃವಿ 2015, ದಿನಾಂಕ 06-05-2015

2) ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಪತ್ರ ಸಂಖ್ಯೆ: ಯೋಜನೆ/ಪಿಎಸ್1/ಮುಯೋ(ಮಾ)/12/16-17, ದಿನಾಂಕ : 25-04-2016/17-05-2016

**ಪ್ರಸ್ತಾವನೆ:**

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗು ರೇಷ್ಮೆ ನಿರ್ದೇಶಕರ ಕಛೇರಿ
ದಿನಾಂಕ : 20/8/16
ಸಹಿ :

ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ದಿನಾಂಕ 06-05-2015 ರ ಆದೇಶದಲ್ಲಿ 2015-16ನೇ ಸಾಲಿನ ರೇಷ್ಮೆ ಇಲಾಖೆಯ 07 ಮಾರ್ಪಾಡಿಲ್ಲದ ವಿವಿಧ ಕಾರ್ಯಕ್ರಮಗಳ ಯೋಜನೆಗಳನ್ನು 2015-16ನೇ ಸಾಲಿನಲ್ಲಿ ಮುಂದುವರೆಸಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2)ರ ದಿನಾಂಕ 25-04-2016/17-05-2016ರ ಪತ್ರದಲ್ಲಿ ರೇಷ್ಮೆ ನೂಲು ಬಿಚ್ಚಾಣಿಕೆಯು ಅನೇಕ ಸಂಸ್ಕರಣಗಳನ್ನು ಒಳಗೊಂಡಿದ್ದು, ಗೂಡುಗಳಿಂದ ಉತ್ತಮ ರೀತಿಯಲ್ಲಿ ರೇಷ್ಮೆ ಎಳೆಯನ್ನು ಬಿಚ್ಚುವುದು ಇದರ ಉದ್ದೇಶವಾಗಿದೆ. ರೇಷ್ಮೆ ಉತ್ಪಾದಕತೆ ಹಾಗೂ ಗುಣಮಟ್ಟದ ಮೇಲೆ ಕಚ್ಚಾ ವಸ್ತುವಿನ ಗುಣಮಟ್ಟ, ಸಂಸ್ಕರಣಾ ಅಂಶಗಳು, ಯಂತ್ರೋಪಕರಣಗಳು, ನೀರಿನ ಗುಣಮಟ್ಟ, ನೈಪುಣ್ಯತೆ ನೇರವಾಗಿ ಪ್ರಭಾವ ಬೀರುವ ಪ್ರಮುಖ ಅಂಶಗಳಾಗಿರುತ್ತದೆ. ಈ ಎಲ್ಲಾ ಅಂಶಗಳನ್ನು ಒಂದೇ ಸೂರಿನಡಿ ನಿರ್ವಹಣೆ ಮಾಡಿದಲ್ಲಿ (ರೀಲಿಂಗ್ ಶೆಡ್) ಉತ್ತಮ ಗುಣಮಟ್ಟದ ರೇಷ್ಮೆಯನ್ನು ಉತ್ಪಾದಿಸಲು ಸಾಧ್ಯವಾಗುತ್ತದೆ.

ರೀಲಿಂಗ್ ಉದ್ಯಮದಲ್ಲಿ ತೊಡಗಿರುವ ಸುಮಾರು 7639 ರೀಲರ್‌ಗಳ ಪೈಕಿ ಶೇ.97ರಷ್ಟು ಮಂದಿ ಚರಕಾ ಮತ್ತು ಫಿಲೇಚರ್ ಬೇಸಿನ್ ಹೊಂದಿದವರಾಗಿರುತ್ತಾರೆ. ರೀಲರುಗಳ ಆರ್ಥಿಕ ಪರಿಸ್ಥಿತಿ ಸಧೃಡವಲ್ಲದ ಕಾರಣ ಸಾಮಾನ್ಯವಾಗಿ ರೀಲಿಂಗ್ ಚಟುವಟಿಕೆಗಳು ವಾಸದ ಮನೆಯ ಒಂದು ಭಾಗದಲ್ಲಿ ನಡೆಸುತ್ತಿರುತ್ತಾರೆ. ರೇಷ್ಮೆ ಗೂಡಿನಿಂದ ದಾರ ಬಿಚ್ಚುವಲ್ಲಿ ರೇಷ್ಮೆ ಗೂಡಿನ ಒಳಗೆ ಸತ್ತ ಪ್ಯೂಪಾ ಉಳಿಯುವುದರಿಂದ ಹೊರಹೊಮ್ಮುವ ವಾಸನೆ ಮನೆಯಲ್ಲಿ ವಾಸ ಮಾಡುವವರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ರೀಲರುಗಳು ಮತ್ತು ಅವರ ಕುಟುಂಬದ ಸದಸ್ಯರ ಆರೋಗ್ಯ ಕಾಪಾಡುವ ದೃಷ್ಟಿಯಿಂದ ಪರಿಸರದಲ್ಲಿ ನೈರ್ಮಲ್ಯವಾದ ವಾತಾವರಣ ಕಲ್ಪಿಸುವ / ನಿರ್ಮಿಸುವ ದೃಷ್ಟಿಯಲ್ಲಿ ಪ್ರತ್ಯೇಕವಾದ ರೀಲಿಂಗ್ ಶೆಡ್‌ಗಳಲ್ಲಿ ರೇಷ್ಮೆ ನೂಲು ಬಿಚ್ಚಾಣಿಕೆ ಮಾಡುವುದು ಸೂಕ್ತವಾಗಿರುತ್ತದೆ. ಈ ಹಿನ್ನಲೆಯಲ್ಲಿ ಪ್ರತ್ಯೇಕ ರೀಲಿಂಗ್ ಶೆಡ್‌ಗಳನ್ನು ಹೊಂದಲು ರೀಲರುಗಳನ್ನು ಪ್ರೋತ್ಸಾಹಿಸಲು ರೀಲಿಂಗ್ ಶೆಡ್ ನಿರ್ಮಾಣಕ್ಕೆ ಪ್ರೋತ್ಸಾಹಧನ ನೀಡುವ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದೆ. ಕಳೆದ 5 ವರ್ಷಗಳಿಂದ ವಿವಿಧ ಯೋಜನೆಗಳಡಿ 375 ಶೆಡ್ ನಿರ್ಮಾಣಕ್ಕೆ ಸಹಾಯಧನ ಒದಗಿಸಲಾಗಿದೆ.

ಈ ಹಿಂದೆ 2014-15ರ ಸಾಲಿನವರೆಗೆ ಕೇಂದ್ರ ಪುರಸ್ಕೃತ ಕೆಟಲಿಟಿಕ್ ಅಭಿವೃದ್ಧಿ ಯೋಜನೆ ಅನುಷ್ಠಾನದಲ್ಲಿದ್ದು, ಸದರಿ ಯೋಜನೆಗಳಡಿ ನಿಗದಿಪಡಿಸಿದ ವಿಸ್ತೀರ್ಣ, ಘಟಕದರ ಮತ್ತು ಸಹಾಯಧನ ದರಗಳಂತೆ ಕಾರ್ಯಕ್ರಮ ಅನುಷ್ಠಾನಗೊಳಿಸಿದ್ದು ಇದೇ ದರಗಳನ್ನು 2015-16ನೇ ಸಾಲಿನ ರಾಜ್ಯ ಯೋಜನೆ ಅಡಿ ಅಳವಡಿಸಿಕೊಳ್ಳಲಾಗಿತ್ತು.

ಸದರಿ ಕಾರ್ಯಕ್ರಮವು 2016-17ನೇ ಸಾಲಿನಲ್ಲಿ ಮುಂದುವರೆದ ಕಾರ್ಯಕ್ರಮವಾಗಿರುತ್ತದೆ. ಪ್ರಸ್ತುತ ರಾಜ್ಯ ಯೋಜನೆ ಅಡಿಯಲ್ಲಿ ಹಿಂದಿನ ಘಟಕದರಗಳನ್ವಯ 600, 900 ಮತ್ತು 1200 ಚ.ಅಡಿ ರೀಲಿಂಗ್ ಶೆಡ್‌ಗಳಿಗೆ ಕ್ರಮವಾಗಿ ರೂ.3.00 ಲಕ್ಷ, ರೂ.5.40 ಲಕ್ಷ ಮತ್ತು ರೂ.7.20 ಲಕ್ಷಗಳ ಘಟಕ ದರ ನಿಗಧಿಪಡಿಸಿದ್ದು, ಸಾಮಾನ್ಯ ವರ್ಗಕ್ಕೆ ಶೇ.50 ಹಾಗೂ ಪರಿಶಿಷ್ಟ ಜಾತಿ/ಪಂಗಡ ಶೇ.90ರಷ್ಟು ಸಹಾಯಧನ ನೀಡಲಾಗುತ್ತಿದೆ.

ಮು.ತಿ.ನೋ. . . .

2015-16ನೇ ಸಾಲಿನಲ್ಲಿ ಸದರಿ ಕಾರ್ಯಕ್ರಮ ಅನುಷ್ಠಾನವನ್ನು ವಿಶ್ಲೇಷಿಸಲಾಗಿ ಹಾಲಿ ಸಹಾಯಧನ ನೀಡಿಕೆಗೆ ನಿಗಧಿಯಾದ ರೀಲಿಂಗ್ ಶೆಡ್ ವಿಸ್ತೀರ್ಣ 600 ಚ. ಅಡಿ, 900 ಚ.ಅಡಿ ಮತ್ತು 1200 ಚ.ಅಡಿ ವಿಸ್ತೀರ್ಣದ ಶೆಡ್ ನಿರ್ಮಾಣದಿಂದ ಕೇವಲ ದೊಡ್ಡ ರೀಲರ್‌ಗಳಿಗೆ ಅನುಕೂಲವಾಗುವುದು. ಈ ವಿಸ್ತೀರ್ಣದ ಶೆಡ್‌ಗಳಿಗೆ ಘಟಕ ವೆಚ್ಚವು ಹೆಚ್ಚಿದ್ದು, ಇದರಲ್ಲಿ ಶೇಕಡ 50ರಷ್ಟನ್ನು ಸಹಾಯಧನವಾಗಿ ನೀಡಲಾಗುವುದು ಉಳಿದ ಶೇಕಡ 50ರಷ್ಟನ್ನು ಫಲಾನುಭವಿಯು ಭರಿಸಬೇಕಾಗಿದ್ದು, ಇದು ಸಾಮಾನ್ಯ ಅಥವಾ ಸಣ್ಣ ರೀಲರುಗಳಿಗೆ ಸಾಧ್ಯವಾಗುವುದಿಲ್ಲ.

ಹೆಚ್ಚಿನ ಸಂಖ್ಯೆಯ ರೀಲರುಗಳು ಅಲ್ಪಸಂಖ್ಯಾತ ಮತ್ತು ಪರಿಶಿಷ್ಟ ವರ್ಗಗಳಿಗೆ ಸೇರಿದ ಸಣ್ಣ ರೀಲರುಗಳಾಗಿರುತ್ತಾರೆ. ಹೆಚ್ಚಿನ ವಿಸ್ತೀರ್ಣದ ರೀಲಿಂಗ್ ಶೆಡ್ ನಿರ್ಮಾಣ ಕೈಗೊಳ್ಳಲು ಅಶಕ್ತರಾಗಿರುತ್ತಾರೆ. ಸಣ್ಣ ರೀಲರ್‌ಗಳ ಸಮುದಾಯಕ್ಕೆ ಹೆಚ್ಚು ಸಹಕಾರಿಯಾಗುವಂತೆ ಪ್ರತ್ಯೇಕ ರೀಲಿಂಗ್ ಶೆಡ್ ನಿರ್ಮಾಣವನ್ನು ಪ್ರೋತ್ಸಾಹಿಸಲು ರೀಲಿಂಗ್ ಶೆಡ್‌ಗಳಿಗೆ ಕಡಿಮೆ ವೆಚ್ಚದಲ್ಲಿ ನಿರ್ಮಾಣ ಮಾಡಲು ಅನುಕೂಲವಾಗುವಂತೆ ದರಗಳನ್ನು ಪರಿಷ್ಕರಿಸುವುದು ಅಗತ್ಯವಾಗಿರುತ್ತದೆ. ಈಗಾಗಲೇ ರೇಷ್ಮೆ ಬೆಳೆಗಾರರಿಗೆ ಹುಳು ಸಾಕಾಣಿಕೆ ಮನೆಗಳ ಸಹಾಯಧನ ನೀಡಿಕೆಗೆ ಘಟಕ ದರ ಮತ್ತು ಸಹಾಯಧನಗಳ ಪರಿಷ್ಕರಣೆಗೆ ಸಲ್ಲಿಸಿರುವ ಪ್ರಸ್ತಾವನೆ ರೀತ್ಯಾ ರೀಲಿಂಗ್ ಶೆಡ್‌ಗಳಿಗೆ ಘಟಕದರಗಳನ್ನು ಈ ಕೆಳಕಂಡಂತೆ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಪ್ರಸ್ತಾಪಿಸಿರುತ್ತಾರೆ.

**ರೀಲಿಂಗ್ ಶೆಡ್ ನಿರ್ಮಾಣಕ್ಕೆ ನೀಡಲಾಗುತ್ತಿರುವ ಸಹಾಯಧನ: ಪ್ರಸ್ತುತ ಅನುಷ್ಠಾನದಲ್ಲಿರುವಂತೆ ಘಟಕ ದರ/ ಸಹಾಯಧನಗಳ ವಿವರಗಳು**

(ರೂ.ಲಕ್ಷಗಳಲ್ಲಿ)

| ಕ್ರ ಸಂ | ವಿವರ | ಘಟಕ ದರ | ಸಹಾಯಧನ ಪರಿಮಾಣ(%) | | ಸಹಾಯಧನ ವೆಚ್ಚ | |
|---|---|---|---|---|---|---|
| | | | ಸಾಮಾನ್ಯ | ಪಜಾ/ಪಪಂ | ಸಾಮಾನ್ಯ | ಪಜಾ/ಪಪಂ |
| 1 | **600 ಚ.ಅಡಿ** | 3.60 | 50 | 90 | 1.8 | 3.24 |
| 2 | **900 ಚ.ಅಡಿ** | 5.40 | 50 | 90 | 2.70 | 4.86 |
| 3 | **1200 ಚ.ಅಡಿ** | 7.20 | 50 | 90 | 3.60 | 6.48 |

**<u>ಪರಿಷ್ಕರಣೆಗೆ ಕೋರಿ ಪ್ರೋರೇಟಾ ಆಧರಿಸಿ ಪ್ರತಿ ಚದರ ಅಡಿಗೆ ನೀಡಬೇಕಾದ ಸಹಾಯಧನ</u>**

(ರೂ.ಲಕ್ಷಗಳಲ್ಲಿ)

| ಕ್ರ ಸಂ | ವಿವರ | ಪ್ರಸ್ತುತ ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣಕ್ಕೆ ಇರುವಘಟಕ ದರ | ರೀಲಿಂಗ್ ಶೆಡ್ ನಿರ್ಮಾಣಕ್ಕೆ ಪ್ರಸ್ತಾಪಿಸಿರುವ ಸಹಾಯಧನ | | ಷರಾ |
|---|---|---|---|---|---|
| | | | ಸಾಮಾನ್ಯ | ಪಜಾ/ ಪಪಂ | |
| 1 | 600 ಚ.ಅಡಿ | 1.75 | 1.104 | 1.80 | 600ಚಅಡಿ ವರೆಗೆ ನಿರ್ಮಿಸುವ ರೀಲಿಂಗ್ ಶೆಡ್‌ಗಳಿಗೆ ಪ್ರೋರೇಟಾ ಆಧರಿಸಿ ಸಹಾಯಧನ ನೀಡಿಕೆ<br>ಸಾಮಾನ್ಯ ವರ್ಗ 1 ಚ.ಅಡಿಗೆ ರೂ.184/-<br>ಪಜಾ/ಪಪಂ 1 ಚ.ಅಡಿಗೆ ರೂ.300/- |
| 2 | 1200 ಚ.ಅಡಿ | 2.75 | 1.650 | 3.24 | 601ಚಅಡಿ ಮೇಲ್ಪಟ್ಟು 1200 ಚ ಅಡಿವರೆಗೆ ನಿರ್ಮಿಸುವ ರೀಲಿಂಗ್ ಶೆಡ್‌ಗಳಿಗೆ ಪ್ರೋರೇಟಾ ಆಧರಿಸಿ ಸಹಾಯಧನ ನೀಡಿಕೆ<br>ಸಾಮಾನ್ಯ ವರ್ಗ 1 ಚ.ಅಡಿಗೆ ರೂ.137.50<br>ಪಜಾ/ಪಪಂ 1 ಚ.ಅಡಿಗೆ ರೂ.270.00 |

ಪು.ತಿ.ನೋ. . . . .

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿ 19 ಎಫ್ಆರ್ಓ 2016, ದಿನಾಂಕ 28-06-2016 ಮತ್ತು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 382 ವೆಚ್ಚ-4/2016, ದಿನಾಂಕ 02-08-2016 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಆರ್.ಎಲ್. ಚಿನ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ (ರೇಷ್ಮೆ)
ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ.

**ಇವರಿಗೆ:**

1. ಮಹಾಲೇಖಪಾಲರು, (ಜಿ&ಎಸ್ಎಸ್ಎ)/(ಇ&ಆರ್ಎಸ್ಎ)/(ಎ&ಇ) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ಹಿರಿಯ ನಿರ್ದೇಶಕರು, ಯೋಜನಾ ಇಲಾಖೆ, ಪಿ.ಎಫ್. ವಿಭಾಗ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
6. ಆಂತರಿಕ ಆರ್ಥಿಕ ಸಲಹೆಗಾರರು ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ತೋಟಗಾರಿಕೆ ಮತ್ತು ರೇಷ್ಮೆ ಹಾಗೂ ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನ ಸೌಧ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
9. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು (ರೇಷ್ಮೆ), ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
10. ಶಾಖಾ ರಕ್ಷಾ ಕಡತ.